ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ:ಉಕೃನಿ/ಕೃಷಿ ಭಾಗ್ಯ/ಸುತ್ತೋಲೆ/2015-16.

ಕೃಷಿ ಇಲಾಖೆ ಕೇಂದ್ರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ:18-08-2015.
29

## ಸುತ್ತೋಲೆ-14

ವಿಷಯ: ಕೃಷಿ ಭಾಗ್ಯ ಯೋಜನೆಯಡಿ ಆಸಕ್ತಿಯುಳ್ಳ ರೈತರಿಗೆ ಸೌಲಭ್ಯ ಒದಗಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಅದೇಶ ಸಂಖ್ಯೆ: ಕೃಇ 08 ಕೃಯೋಕಾ 2014 ಬೆಂಗಳೂರು ದಿ: 22-07-2014.
2. ಈ ಕಛೇರಿಯ ಕೃಷಿ ಭಾಗ್ಯ ಯೋಜನೆ ಸುತ್ತೋಲೆ -1, ಸಂಖ್ಯೆ:ಉಕೃನಿ/ಕೃಭಾ/ಸುತ್ತೋಲೆ-1/2014-15 ದಿ: 08-09-2014
3. ಈ ಕಛೇರಿಯ ಕೃಷಿ ಭಾಗ್ಯ ಯೋಜನೆ ಸುತ್ತೋಲೆ -3, ಸಂಖ್ಯೆ:ಉಕೃನಿ/ಕೃಭಾ/ಸುತ್ತೋಲೆ-3/2014-15 ದಿ: 31-10-2014
4. ಕೃಷಿ ಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳೊಂದಿಗೆ ನಡೆಸಿದ ವಿಡಿಯೋ ಕಾನ್ಫರನ್ಸ್ ಸಭೆಯ ನಡವಳಿಗಳು (ದಿನಾಂಕ: 05-01-2015, 12-01-2015, 02- 02-2015, 09-03-2015, 16-03-2015, 23-03-2015, 13-04-2015, 27-04-2015).
5. ಈ ಕಛೇರಿಯ ಕೃಷಿ ಭಾಗ್ಯ ಯೋಜನೆ ಸುತ್ತೋಲೆ -13, ಸಂಖ್ಯೆ:ಉಕೃನಿ/ಕೃಭಾ/ಸುತ್ತೋಲೆ/2014-15/2015-16, ದಿ: 30-04-2015

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೃಷಿ ಭಾಗ್ಯ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗ್ಗೆ ಸರ್ಕಾರಿ ಅದೇಶದಲ್ಲಿ ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಆಯ್ಕೆ ಮಾಡಲು ತಿಳಿಸಲಾಗಿದ್ದು(ಉಲ್ಲೇಖ-1), ನಂತರ ಇಲಾಖೆಯ ಸುತ್ತೋಲೆ-1 ರಲ್ಲಿ (ಉಲ್ಲೇಖ-2), ಅರ್ಜಿಗಳ ಸಂಖ್ಯೆ ಹೆಚ್ಚಾದಲ್ಲಿ ಲಾಟರಿ ಪದ್ಧತಿಯನ್ನು ಅಳವಡಿಸಲು ಹಾಗೂ ಸುತ್ತೋಲೆ-3 ರಲ್ಲಿ (ಉಲ್ಲೇಖ-3), ಲಾಟರಿಯಲ್ಲಿ ಪಾಲಿಹೌಸ್ ರಹಿತ ವರ್ಗದಡಿ 400 ಮತ್ತು ಪಾಲಿಹೌಸ್ ಸಹಿತ ವರ್ಗದಡಿ 20 (ನಿಗಧಿತ ಗುರಿ ಪ್ರತಿ ತಾಲ್ಲೂಕಿಗೆ ಪಾಲಿಹೌಸ್ ರಹಿತ 200+ಪಾಲಿಹೌಸ್ ಸಹಿತ 10) ಫಲಾನುಭವಿಗಳನ್ನು ಆಯ್ಕೆ ಮಾಡಲು ತಿಳಿಸಲಾಗಿರುತ್ತದೆ. ಅದರಂತೆ ತಾಲ್ಲೂಕು ಮಟ್ಟದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನ ಕೈಗೊಳ್ಳಲಾಗುತ್ತಿದ್ದು, ನಂತರ ಅನೇಕ ಸಭೆ/ ವಿಡಿಯೋ ಕಾನ್ಫರೆನ್ಸ್ ಗಳಲ್ಲಿ ಯೋಜನೆಯಡಿ ಪಾಲಿಹೌಸ್ ಸಹಿತ ಹಾಗು ಪಾಲಿಹೌಸ್ ರಹಿತ ವರ್ಗಗಳಡಿ ಪ್ರಗತಿ ನಿಧಾನವಾಗಿ ಸಾಗುತ್ತಿರುವುದನ್ನು ಗಮನಿಸಿ, ಅನುಷ್ಠಾನಾಧಿಕಾರಿಗಳಿಂದ ಯೋಜನೆಯಡಿ ಆಯ್ಕೆಗೊಂಡ ಹೆಚ್ಚು ಫಲಾನುಭವಿಗಳು ಕಾರ್ಯಕ್ರಮ ಅನುಷ್ಠಾನಗೊಳಿಸಲು ಆಸಕ್ತಿ ತೋರುತ್ತಿಲ್ಲ ಎಂಬ ಮಾಹಿತಿಯನ್ನು ಪರಿಗಣಿಸಿ, ಮಾನ್ಯ ಕೃಷಿ ಸಚಿವರು, ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ ಹಾಗು ಇಲಾಖೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಅನೇಕ ವಿಡಿಯೋ ಕಾನ್ಫರೆನ್ಸ್ ಸಭೆಗಳಲ್ಲಿ ಆಸಕ್ತಿ ತೋರದ ರೈತರ ಬದಲಿಗೆ ಆಸಕ್ತಿ ಇರುವ ರೈತರಿಂದ ಅರ್ಜಿ ಪಡೆದು ಕಾರ್ಯಾದೇಶ ನೀಡಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಹಾಗು ಆಸಕ್ತಿಯುಳ್ಳ ಎಲ್ಲಾ ರೈತರಿಗೂ, ಅರ್ಜಿ ಸಲ್ಲಿಸದಿದ್ದರೂ ಆದ್ಯತೆ ಮೇರೆಗೆ ಕಾರ್ಯದೇಶ ನೀಡಿ ಯೋಜನೆಯ ಸೌಲಭ್ಯ ಒದಗಿಸಲು ತಿಳಿಸಲಾಗಿದೆ (ಉಲ್ಲೇಖ-4). ತಾಲ್ಲೂಕುವಾರು ನಿಗಧಿಪಡಿಸಿರುವ ಗುರಿಗಳನ್ನು ಅವಶ್ಯವೆನಿಸಿದರೆ, ಜಿಲ್ಲಾಮಟ್ಟದಲ್ಲಿ ಚರ್ಚಿಸಿ ಅಂತರ ತಾಲ್ಲೂಕು ಬದಲಾವಣೆ ಮಾಡಿಕೊಳ್ಳುವುದು ಹಾಗೂ ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದಲ್ಲಿ ಕೇಂದ್ರ ಕಛೇರಿಗೆ ತಿಳಿಸುವುದರ ಬಗ್ಗೆ ಸಹ ತಿಳಿಸಲಾಗಿರುತ್ತದೆ. ಅಲ್ಲದೆ ಸುತ್ತೋಲೆ ಸಂಖ್ಯೆ-13 ರಲ್ಲಿಯೂ ಸಹ ಆಸಕ್ತಿಯುಳ್ಳ ರೈತರಿಗೆ ಯೋಜನೆಯಡಿ ಅವಕಾಶ ಕಲ್ಪಿಸುವುದರ ಬಗ್ಗೆ ತಿಳಿಸಲಾಗಿದೆ.

ಆದರೂ ಸಹ, ಕೆಲವು ಆಸಕ್ತಿಯಳ್ಳ ರೈತರು ಪಾಲಿಹೌಸ್ ಘಟಕ ಅನುಷ್ಠಾನ ಕೈಗೊಳ್ಳಲು ಅವಕಾಶ ನೀಡುತ್ತಿಲ್ಲವೆಂದು ಮಾನ್ಯ ಸಚಿವರ ಗಮನಕ್ಕೆ ತಂದಿರುವುದಾಗಿ ತಿಳಿದುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿರುವ ಅಂಶಗಳನ್ನು ಮತ್ತೊಮ್ಮೆ ಅನುಷ್ಠಾನಾಧಿಕಾರಿಗಳ ಗಮನಕ್ಕೆ ತರುತ್ತಾ, ಆಸಕ್ತಿಯುಳ್ಳ ಎಲ್ಲಾ ರೈತರಿಗೆ ಕೃಷಿ ಭಾಗ್ಯ ಯೋಜನೆಯಡಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತಾ, ಜಿಲ್ಲಾಮಟ್ಟದಲ್ಲಿ ಅನುದಾನ ಲಭ್ಯತೆ ಆಧರಿಸಿ, ತಾಲ್ಲೂಕುವಾರು ಬೇಡಿಕೆಗನುಗುಣವಾಗಿ ಅನುದಾನ ಬಿಡುಗಡೆ/ ವರ್ಗಾವಣೆ ಯನ್ನು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆ ಪಡೆದು ವ್ಯವಸ್ಥೆ ಮಾಡಲು ಸೂಚಿಸಿದೆ. ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದಲ್ಲಿ ಕೇಂದ್ರ ಕಛೇರಿಗೆ ಬೇಡಿಕೆ ಸಲ್ಲಿಸಿದಲ್ಲಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು.

**(ಕರಡು ಕೃಷಿ ಆಯುಕ್ತರು(ಪ್ರ)ರವರಿಂದ ಅನುಮೋದಿಸಲ್ಪಟ್ಟಿದೆ.)**

ಕೃಷಿ ಆಯುಕ್ತರ ಪರವಾಗಿ

ಪ್ರತಿಯನ್ನು, ಮಾಹಿತಿಗಾಗಿ

1. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ
2. ಆಯುಕ್ತರು, ಪಶುಸಂಗೋಪನೆ ಮತ್ತು ವೈದ್ಯಕೀಯ ಇಲಾಖೆ
3. ನಿರ್ದೇಶಕರು, ತೋಟಗಾರಿಕೆ ಇಲಾಖೆ
4. ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು
5. ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಗೊಳಿಸುತ್ತಿರುವ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು.